ರೂವಾರಿಯಾದ ಆಗಸ್ಟ್ ಹಿರ್ಟ್‌ಗೆ ಅವನ ಅನುಪಸ್ಥಿತಿಯಲ್ಲಿ ಮರಣ ದಂಡನೆ ವಿಧಿಸಲಾಗುತ್ತದೆ. ಆದರೆ ಆನಂತರ ತಿಳಿದ ವಿಷಯವೆಂದರೆ ಇಂತಹ ಬೆಳವಣಿಗೆಗಳನ್ನು ನಿರೀಕ್ಷಿಸಿದ್ದ ಆಗಸ್ಟ್ ಹಿರ್ಟ್, 1945ರಲ್ಲಿಯೇ ಬ್ಲಾಕ್‌ಫಾರೆಸ್ಟ್ ಎಂಬ ಕಾಡಿನಲ್ಲಿ ಗುಂಡಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು. ಈ ಎಲ್ಲ ದುರಂತಗಳನ್ನು ಬಿಂಬಿಸುವ ತಾಮ್ರದ ಫಲಕವೊಂದನ್ನು ಆಗಸ್ಟ್ ಹಿರ್ಟ್ ಯೋಜಿಸಿದ್ದ ಕಟುಕಶಸ್ತ್ರಶಾಲೆಯ ಮುಂದೆ ಕಾಣಬಹುದು.

ವಿಚಿತ್ರವೆಂದರೆ ಆಗಸ್ಟ್ ಹಿರ್ಟ್‌ನ ಯೋಜನೆಗೆ ಯೆಹೂದಿಗಳನ್ನು ಗುರುತಿಸುವಲ್ಲಿ ತೊಡಗಿಸಿಕೊಂಡಿದ್ದ ಬೆಗರ್ ಈ ಯೋಜನೆಯ ಒಂದು ಪ್ರಮುಖ ವ್ಯಕ್ತಿಯಾದರೂ ಆತನಿಗೆ ಕೇವಲ ಮೂರು ವರ್ಷಗಳ ಜೈಲು ಶಿಕ್ಷೆಯಾಗುತ್ತದೆ. ಆತ ಪರೋಕ್ಷವಾಗಿ ಮಾತ್ರ ಈ ದಾರುಣ ಹತ್ಯೆಯಲ್ಲಿ ಭಾಗಿಯಾಗಿದ್ದ ಎಂಬ ಕಿರು ಆರೋಪದ ಮೇಲೆ. ಆದರೆ ಆತ ಎಂದೂ ಸೆರೆಮನೆಗೆ ಹೋಗುವುದಿಲ್ಲ. ಬದಲಿಗೆ ನೀವೆ ನೋಡಿದಂತೆ ದಲೈ ಲಾಮಾರಂತಹ ಪ್ರಪಂಚ ಪ್ರಸಿದ್ಧ ವ್ಯಕ್ತಿಗಳ ಒಡನಾಟದಲ್ಲಿಯೆ ಇದ್ದು 2009ರಲ್ಲಿ ಸಾಯುತ್ತಾನೆ. ಇನ್ನೂ ವಿಚಿತ್ರವೆಂದರೆ ಬೆಗರ್ ಕೂಡ ನಾಜಿ ಸಂಘದ ಸದಸ್ಯನಾಗಿದ್ದು, ಯೆಹೂದಿ ದ್ವೇಷಿಯಾಗಿದ್ದ ಹಾಗೂ 'ಆರ್ಯರಕ್ತ'ದ ಔನ್ನತ್ಯವನ್ನು ದೃಢವಾಗಿ ನಂಬಿದ್ದ ಎನ್ನುವುದಕ್ಕೆ ಹಲವಾರು ದಾಖಲೆಗಳಿವೆ.

ಇದಿಷ್ಟು ನಾವು ಹುಡುಕಿ ತೆಗೆದ ವಿಷಯಗಳು. ಆದರೆ ಈ ಎಲ್ಲ ದುರಂತಗಳೂ ನಡೆಯಲು ಪ್ರಮುಖವಾದ ಒಂದು ಚಾಲಕ ಶಕ್ತಿ ಎಂದರೆ ಯುರೋಪಿನ ಜನರಿಗೆ ಅದರಲ್ಲೂ ಜರ್ಮನಿಯ ನಾಜಿಗಳಿಗೆ ನಮ್ಮ ದೇಶದ ಆರ್ಯರ ಮೇಲಿದ್ದ ವಾಂಛೆ ಎನ್ನುವದಂತೂ ಸತ್ಯ.

ಇಂತೀ ನಿಮ್ಮ ಪ್ರೀತಿಯ
ಸೂರಜ್ ಕೃಷ್ಣ'

ಪತ್ರದಲ್ಲಿನ ವಿವರಗಳನ್ನು ಓದಿ ಮುಗಿಸುತ್ತಿದ್ದಂತೆ ನನ್ನಲ್ಲಿ ಈಗಾಗಲೆ ಮನೆ ಮಾಡಿದ್ದ ಹಲವು ಪ್ರಶ್ನೆಗಳು ಮತ್ತೆ ಎದ್ದು ಕಾಡತೊಡಗಿದವು. ಈ ಯೋಜನೆಗೆ ಯೆಹೂದಿಗಳಲ್ಲಿ ಏಷ್ಯಾ ಖಂಡದ ಜನರನ್ನು ಹೋಲುವವರನ್ನೂ ಏಕೆ ಮಾದರಿಯಾಗಿ ಸೇರಿಸುವ ಯೋಚನೆ ಇತ್ತು? ಆಗಸ್ಟ್ ಹಿರ್ಟ್‌ನಂತಹ ಕ್ರೂರ ವ್ಯಕ್ತಿಯ ಜೊತೆ ಸಂಬಂಧ ಬೆಳೆಸಿದ ಈ ಬ್ರುನೋ ಬೆಗರ್ ದಲೈ ಲಾಮಾ ಜೊತೆ ಏಕೆ ಕಾಣಿಸಿಕೊಂಡ? ಈತನಿಗೂ ಬೌದ್ಧ ಧರ್ಮಕ್ಕೂ ಸಂಬಂಧವಿತ್ತೆ? ಆರ್ಯ ಕಣಿವೆಯಲ್ಲಿ ದಿಂಗ್ಸೆ ಏಕೆ ದಲೈ ಲಾಮ ಬ್ರುನೋ ಬೆಗರ್‌ನ ಜೊತೆ ಇರುವ ಚಿತ್ರವನ್ನು ತನ್ನ ಖಾಸಗಿ ಕೊಠಡಿಯಲ್ಲಿ ತೂಗುಹಾಕಿದ್ದರು? ಅಲ್ಲಿನ ಮತ್ತೊಂದು ಚಿತ್ರದಲ್ಲಿದ್ದ ಹೈನ್ರಿಚ್ ಎಂಬಾತ ಏಕೆ ಮತ್ತು ಹೇಗೆ ದಲೈ ಲಾಮಾಗೆ ಪಾಠ ಹೇಳುವವನಾದ? ಅಲ್ಲದೆ ದಿಂಗ್ಸೆ ಬ್ರುನೋ ಬೆಗರ್‌ನ ವಿಷಯದಲ್ಲಿ ಅಷ್ಟೊಂದು ವಿಚಲಿತರಾದದ್ದು ಏಕೆ?

ತಡೆಯಲಾರದೆ ಸೂರಜ್‌ನ ಪತ್ರವನ್ನೂ ಅದರೊಂದಿಗಿನ ಚಿತ್ರಗಳನ್ನೂ ದಿಂಗ್ಸೆಗೆ ಫಾರ್ವರ್ಡ್ ಮಾಡಿ ಒಂದು ಪತ್ರ ಬರೆದೆ:

'ಪ್ರೀತಿಯ ದಿಂಗ್ಸೆ ಅವರಿಗೆ, ಧನ್ಯವಾದಗಳು.

ನಿಮ್ಮಲ್ಲಿಗೆ ಬಂದಾಗಿನಿಂದ ದಲೈ ಲಾಮಾ ಮತ್ತು ಬೆಗರ್ ಬಗ್ಗೆ ನನ್ನ ಕುತೂಹಲ ಹೆಚ್ಚಾಯಿತೆಂದೇ ಹೇಳಬೇಕು. ಹಾಗಾಗಿ ಸ್ಟ್ರಾಸ್‌ಬರ್ಗ್‌ನಲ್ಲಿ ಪಿಎಚ್.ಡಿ ಮಾಡುತ್ತಿರುವ ನನ್ನ ಅಳಿಯನಿಗೆ, ನಾವು ಆರ್ಯ ಕಣಿವೆಗೆ ಬಂದು ನಿಮ್ಮನ್ನು ಭೇಟಿಯಾದ ಬಗ್ಗೆ, ಆರ್ಯರ ಬಗ್ಗೆ ನಿಮ್ಮೊಡನೆ ನಡೆಸಿದ ಸಂವಾದ ಮತ್ತು ನೀವು ಹೇಳಿದ ಆಗಸ್ಟ್ ಹಿರ್ಟ್ ಬಗ್ಗೆಯೂ ಬರೆದೆ. ಆತ